**ಪ್ರಥಮ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ಧರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೈಲಹೊಂಗಲ.**

**ಸಿ.ಸಿ.ನಂ. 68/2025**

ರಾಜ್ಯದ ಪರವಾಗಿ ದೊಡವಾಡ ಪೊಲೀಸ ಠಾಣೆ

**ಪಿರ್ಯಾದುದಾರರು.**

// ವಿರುದ್ದ //

ನಿಂಗಪ್ಪ ರುದ್ರಪ್ಪ ಮಂಗಳಗಟ್ಟಿ

**ಆರೋಪಿತರು.**

**ದೋಷಾರೋಪಣೆ**

ನಾನು ಬಸವರಾಜ ನಾಯಕ ಎಸ್.ಪಿ ಬಿ.ಎ.ಎಲ್.ಎಲ್.ಬಿ.ಎಲ್.ಎಲ್.ಎಂ ಪ್ರಥಮ ಅಪರ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಬೈಲಹೊಂಗಲ ಈ ಮೂಲಕ ಕೆಳಕಂಡಂತೆ ನಿಮ್ಮನ್ನು ಅಂದರೆಃ

ನಿಂಗಪ್ಪ ರುದ್ರಪ್ಪ ಮಂಗಳಗಟ್ಟಿ
ಸಾಃಬುಡರಕಟ್ಟಿ ತಾಃ ಬೈಲಹೊಂಗಲ

**ಈ ಕೆಳಗಿನ ಆರೋಪಕ್ಕೆ ಗುರಿಪಡಿಸುತ್ತಿದ್ದೆನೆ.**

ಅಭಿಯೋಜನೆಯವರು ನಿಮ್ಮ ಮೇಲೆ ಆರೋಪಿಸುವುದೇನೆಂದರೆ, ದೊಡವಾಡ ಪೋಲಿಸ ಠಾಣಾ ಹದ್ದಿಯ ಪೈಕಿ ಬುಡರಕಟ್ಟಿ ಗ್ರಾಮದ ಆರೋಪಿಯಾದ ನೀವು ಮತ್ತು ಪಿರ್ಯಾದಿ ಮತ್ತು ಸಾಕ್ಷಿದಾರ ವ ಗಾಯಾಳು ಅನಂ.6 ಸಂಬಂಧಿಕರು ಇದ್ದು, ಪಿರ್ಯಾದಿಯವರು ಈಗ 15 ದಿನಗಳ ಹಿಂದೆ ತನ್ನ ಮಾವ ಸಾಕ್ಷಿದಾರ ಅ.ನಂ.07 ಇವರ ಮನೆಗೆ ಬಂದು ಶೇತ್ಕಿ ಕೆಲಸ ಮಾಡುತ್ತಿದ್ದು. ಪಿರ್ಯಾದಿಯು ದಿಃ18.11.2024 ರಂದು ರಾತ್ರಿ 11.00 ಗಂಟೆಗೆ ಆರೋಪಿತನಾದ ತಮ್ಮ ಮನೆಗೆ ಮಲಗಲಿಕ್ಕೆ ಹೋಗುವಾಗ ಆರೋಪಿತನಾದ ನೀವು ನಮ್ಮ ಮನಿಗ್ಯಾಕ ಮಲಗಾದ ಬರತಿ ಯಾರ ಮನಿ ಮುರ್ಯಾಕ ಬಂದಿ ಸೂಳೇ ಮಗನ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 352 ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿಯಾದ ನೀವು ಪಿರ್ಯಾದಿಯವರಿಗೆ ಬ್ಯಾಕೋಲ ಬಡಿಗೆಯಿಂದ ಬೆನ್ನಿಗೆ, ನಡಕ್ಕೆ, ಡೊಕ್ಕೆಗೆ, ಬಲಗೈಗೆ ಬಡಿದು ಕೆಳಗೆ ಕೆಡವಿ ತೊಡೆ ಹತ್ತಿರ

ಬಡಿದು ಸಾದಾ ಗಾಯ ಪಡಿಸಿದ್ದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 118(1) ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳದಲ್ಲಿ ಆರೋಪಿಯಾದ ನೀವು ಜಗಳವನ್ನು ಬಿಡಿಸಲು ಬಂದ ಸಾಕ್ಷಿದಾರ ಅ.ನಂ.06 ಇವರಿಗೆ ಬ್ಲಾಕೋಲ ಬಡಿಗೆಯಿಂದ ತಲೆಗೆ, ಬುಜಕ್ಕೆ, ಬಲಗೈ ಮುಂಗೈ ಹತ್ತಿರ ಬಡಿದು ಮುಂಗೈಯ ಹತ್ತಿರ ಮುರಿದು ಭಾರಿ ಗಾಯಪಡಿಸಿದ್ದು, ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ. 118(2) ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಮೇಲೆ ಹೇಳಿದ ದಿನಾಂಕ, ಸಮಯ ಸ್ಥಳದಲ್ಲಿ ಆರೋಪಿತಯಾದ ನೀವು ಪಿರ್ಯಾದಿ ಹಾಗೂ ಸಾಕ್ಷಿದಾರ ಅ.ನಂ.06 ಇವರಿಗೆ ಊರಾಗ ಇದ್ದ ಬಾಳೆ ಮಾಡರಿ ಮಕ್ಕಳಿರ್ಯಾ ನಿಮ್ಮನ್ನ ಕಲಸಾ ಮಾಡುತ್ತೇನೆ ಅಂತಾ ಜೀವದ ಧಮಕಿ ಹಾಕಿದ್ದು ಈ ಮೂಲಕ ಭಾರತೀಯ ನ್ಯಾಯ ಸಂಹಿತೆಯ ಕಲಂ.351(2) ರ ಪ್ರಕಾರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುತ್ತೀರಿ?

ಪ್ರಶ್ನೆ 1. ಈ ಮೇಲಿನ ದೋಷಾರೋಪಣೆಯ ಸಾರಾಂಶ ನಿಮಗೆ ಅರ್ಥವಾಯಿತೇ?

ಉತ್ತರ. ಆ:

ಪ್ರಶ್ನೆ 2.ಈ ಮೇಲಿನ ಆಪಾಧನೆಯನ್ನು ನೀವು ಒಪ್ಪಿಕೊಳ್ಳುವಿರಾ? ಅಥವಾ ವಿಚಾರಣೆಯನ್ನು ನಡೆಸುವಿರಾ?

ಉತ್ತರ. ಆ:

(ಈ ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಿ ಹೇಳಲಾಯಿತು. ಈ ದಾಖಲೆಯು ಆರೋಪಿತರು ನೀಡಿದ ನಿಜವಾದ ಮತ್ತು ಅವರ ಪೂರ್ಣವಾದ ಹೇಳಿಕೆಯನ್ನು ಒಳಗೊಂಡಿದೆ ಎಂದು ಈ ಮೂಲಕ ದೃಡೀಕರಿಸಲಾಗಿದೆ.)

ಸಹಿ/-

ದಿ:10.11.2025 **ಪ್ರ.ಆ.ದಿ.ನ್ಯಾ.ಪ್ರ.ದ.ನ್ಯಾ.ದಂ.ಬೈಲಹೊಂಗಲ**